# ಅಂಬಿಗರ ಚೌಡಯ್ಯ

ಭಾಗ್ಯಜ್ಯೋತಿ*

DOI: https://doi.org/10.5281/zenodo.22300757

**ABSTRACT**

೧೨ನೇ ಶತಮಾನದ ಕಲ್ಯಾಣ ಕ್ರಾಂತಿ ಮತ್ತು ವಚನ ಚಳುವಳಿಯಲ್ಲಿ ಅಗ್ರಗಣ್ಯ ಶರಣರಾಗಿದ್ದ ಅಂಬಿಗರ ಚೌಡಯ್ಯನವರ ಬದುಕು, ಬರಹ ಹಾಗೂ ಸಮಾಜಮುಖಿ ಚಿಂತನೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಅನುಭವ ಮಂಟಪದಲ್ಲಿ 'ನಿಜಶರಣ' ಎಂಬ ಬಿರುದಿಗೆ ಪಾತ್ರರಾಗಿದ್ದ ಇವರು, ತಮ್ಮ ಕಾಯಕ ನಿಷ್ಠೆ ಮತ್ತು ದಿಟ್ಟತನದ ವಚನಗಳ ಮೂಲಕ ಮೂಢನಂಬಿಕೆ, ವೈದಿಕತೆ ಹಾಗೂ ಜಾತೀಯತೆಯನ್ನು ಕಟುವಾಗಿ ಟೀಕಿಸಿದರು. ಮನುಷ್ಯನ ದೇಹದ ಅಂಗಾಂಗಗಳಿಗೆ ೧೮ ಜಾತಿಗಳನ್ನು ಸಮೀಕರಿಸಿ ಜಾತಿ ಪದ್ಧತಿಯನ್ನು ಸಮಾಜದಿಂದ ಬೇರುಸಹಿತ ಕೀಳಲು ಅವರು ಬಳಸಿದ ರೂಪಕ ವಿಧಾನ ಅತ್ಯಂತ ವಿಶಿಷ್ಟವಾದದ್ದು. ವಚನ ಸಾಹಿತ್ಯದ ರಕ್ಷಣೆಯಲ್ಲಿ ವೀರ ಗಣಾಚಾರಿಯಾಗಿ ಹೋರಾಡಿದ ಚೌಡಯ್ಯನವರ ಕಾಲ, ಜನ್ಮಸ್ಥಳ, ಕಾಯಕ ಮತ್ತು ಶರಣ ಧರ್ಮದ ಪ್ರಚಾರಕ್ಕಾಗಿ ಅವರು ನೀಡಿದ ಅಪಾರ ಕೊಡುಗೆಯನ್ನು ಐತಿಹಾಸಿಕ ಹಿನ್ನೆಲೆ ಹಾಗೂ ಅವರ ವಚನಗಳ ಆಧಾರದ ಮೇಲೆ ಸಮಗ್ರವಾಗಿ ಕಟ್ಟಿಕೊಡಲಾಗಿದೆ.

**KEYWORDS:** ಅಂಬಿಗರ ಚೌಡಯ್ಯ, ವಚನ ಸಾಹಿತ್ಯ, ಅನುಭವ ಮಂಟಪ, ಕಲ್ಯಾಣ ಕ್ರಾಂತಿ, ಜಾತಿ ನಿರ್ಮೂಲನೆ.

* **ಡಾ. ಭಾಗ್ಯಜ್ಯೋತಿ,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಕಲಬುರಗಿ.

ಕನ್ನಡ ನಾಡಿನಲ್ಲಿ 12ನೇ ಶತಮಾನವು ತುಂಬ ವಿಶಿಷ್ಟವಾಗಿದೆ. ಶತಮಾನಗಳಿಂದಲೂ ಹಾಗೇ ಉಳಿದು ಬಂದಿರುವ ಧಾರ್ಮಿಕವಾದ ಕುರುಡುನಂಬುಗೆಗಳು, ಸಾಮಾಜಿಕವಾದ ಅಸಮಾನ ಸ್ಥಾನಮಾನಗಳು, ಕೇವಲ ಬ್ರಾಹ್ಮಣರ ಸೊತ್ತಾಗಿದ್ದು ಆಧ್ಯಾತ್ಮಿಕ ವೇದಿಕೆಗಳು, ಪಂಡಿತರಿಗೆ ಮಾತ್ರ ಮೀಸಲಾಗಿದ್ದು ಸಾಹಿತ್ಯಿಕ ಸಮಾರಂಭಗಳು ಪ್ರಸ್ತುತ ಶತಮಾನದಲ್ಲಿ ವಚನಕಾರರ ಪ್ರಮುಖವಾದ ವಿಚಾರಗಳಿಂದ ಬೇರುಸಹಿತ ಕಿತ್ತೆಸೆಯಲ್ಪಟ್ಟವು. ಧಾರ್ಮಿಕ, ಆಧ್ಯಾತ್ಮಿಕ ಮತ್ತು ಸಾಹಿತ್ಯಿಕ ವೇದಿಕೆಗಳ ಸಾರ್ವತ್ರಿಕತೆಗಾಗಿ ಬಸವಣ್ಣನವರಿಂದ ಕಲ್ಯಾಣದಲ್ಲಿ ಅನುಭವಮಂಟಪ ಎಂಬ ಸಂಕೀರ್ಣ ಸಭಾಗೃಹವೊಂದು ನಿರ್ಮಾಣವಾಯಿತು. ಇದರ ನಿರೀಕ್ಷಣೆಯಲ್ಲಿಯೇ ಇದ್ದರೇನೋ ಎನ್ನುವ ಹಾಗೆ ಬೇರೆ ಬೇರೆ ಪ್ರದೇಶದ ಬೇರೆ ಬೇರೆ ಮೂಲದ ಅಸಂಖ್ಯಾತ ಶರಣರು ಕಲ್ಯಾಣಕ್ಕೆ ಧಾವಿಸಿ ಬಂದರು. ಅನುಭವ ಮಂಟಪವನ್ನು ಸೇರಿದರು. ಸಮಾಜದ ಏಳಿಗೆಗಾಗಿ, ಧರ್ಮದ ಉನ್ನತಿಗಾಗಿ, ಚಿಂತಿಸಿದರು. ಅವರಲ್ಲಿ ಅಂಬಿಗರ ಚೌಡಯ್ಯನವರು ಒಬ್ಬರಾಗಿದ್ದಾರೆ.

ಅಂಬಿಗರ ಚೌಡಯ್ಯನವರು ಅಗ್ರಗಣ್ಯರಾಗಿದ್ದಾರೆ. ಅಷ್ಟೇ ಏಕೆ ಅನುಭವ ಮಂಟಪದಲ್ಲಿಯೇ ಎದ್ದು ಕಾಣುವ ವ್ಯಕ್ತಿತ್ವ ಅವರದ್ದಾಗಿತ್ತು. ವೀರ ಗಣಾಚಾರಿ ಮಡಿವಾಳ ಮಾಚಯ್ಯ, ಜ್ಞಾನನಿಧಿ ಚನ್ನಬಸವಣ್ಣ, ಜಂಗಮಶ್ರೇಷ್ಠ, ಅಲ್ಲಮಪ್ರಭುದೇವರ ಮಟ್ಟವನ್ನು ಮುಟ್ಟುವಂತಹ ಯೋಗ್ಯತೆ ಅವರಲ್ಲಿತ್ತು ಎಂದು ವಚನಗಳನ್ನು ಓದಿದ ಯಾರಿಗೂ ಅನಿಸುತ್ತದೆ. ಹೆಸರೇ ಸೂಚಿಸುವಂತೆ ಅಂಬಿಗರ ಚೌಡಯ್ಯನವರು ಅಂಬಿಗ (ಕಬ್ಬಲಿಗ) ಮತದವರಾಗಿದ್ದರು, ತಮ್ಮ ಕುಲಕಸುಬಾದ ದೋಣಿ ನಡೆಸುವ ಕಾಯಕವನ್ನು ಕಲ್ಯಾಣದ ತ್ರಿಪುರಾಂತಕೇಶ್ವರ ಕೆರೆಯಲ್ಲಿ ಕೈಗೊಂಡಿದ್ದರು. ಅಂಬಿಗರ ಚೌಡಯ್ಯನವರ ಕಾಲ-ದೇಶದ ಕುರಿತು ಇಲ್ಲಿಯವರೆಗೆ ಚಿಂತಿಸಿದ ವಿದ್ವಾಂಸರಲ್ಲಿ ಆರ್. ನರಸಿಂಹಾಚಾರ್, ಡಾ. ಎಂ.ಎಂ. ಕಲಬುರ್ಗಿ, ಎಸ್. ಎಸ್. ಭೂಸರಡ್ಡಿ ಮುಂತಾದವರು ಪ್ರಮುಖರಾಗಿದ್ದಾರೆ. ಇವರ ಪರಿಶ್ರಮದ ಫಲವಾಗಿ ಮೂಡಿಬಂದ ಸತ್ಯವನ್ನೂ, ಅಂಬಿಗರ ಚೌಡಯ್ಯನವರನ್ನು ಹಾಡಿ ಹೊಗಳಿದ ಬೆರಳೆಣಿಕೆಯ ಕನ್ನಡ ಕಾವ್ಯಗಳನ್ನು ಹಾಗೂ ಮುಖ್ಯವಾಗಿ ಚೌಡಯ್ಯನವರ ವಚನಗಳನ್ನು ಮೂಲವಾಗಿಟ್ಟುಕೊಂಡು ಅವರ ಕಾಲ-ದೇಶದ ಮೇಲೆ ಹೊಸ ಬೆಳಕು ಚೆಲ್ಲಲು ನಾನಿಲ್ಲಿ ಪ್ರಯತ್ನಿಸಿದ್ದೇನೆ.

ಕವಿ ಚರಿತೆಕಾರರು ಅಂಬಿಗರ ಚೌಡಯ್ಯನವರ ಕಾಲವನ್ನು ಕ್ರಿ.ಶ.ಸು. 1160 ಎಂದು ಗುರುತಿಸಿದ್ದಾರೆ. ಇವರು ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲೂಕಿನ ಚೌಡಯ್ಯದಾನಪುರ ಅಂದರೆ ಅಂದಿನ ಶಿವಪುರ. 12ನೇ ಶತಮಾನದಲ್ಲಿ ಚಂದ್ರಾಪುರ, ಶಿವಪುರ, ನರಸೀಪುರ ಇವು ತ್ರಿಪುರಗಳಾಗಿದ್ದು, ಇವುಗಳಲ್ಲಿ ಶಿವಪುರ ಚೌಡಯ್ಯನವರ ಜನ್ಮಸ್ಥಳ ಎಂಬುದು ಆ ಭಾಗದ ಊರುಗಳಲ್ಲಿ ಜನರು ಆಡುವ ಭಾಷೆ ಮೇಲೆ ಗೊತ್ತಾಗುತ್ತದೆ. ತಂದೆ ವಿರೂಪಾಕ್ಷ ತಾಯಿ ಪಂಪಾದೇವಿಯ ಗರ್ಭದಲ್ಲಿ 1120ರ ಜನವರಿ 21ರಂದು ಜನಿಸಿ, ತ್ರಿಪುರಗಳಲ್ಲಿ ಒಂದಾದ ನರಸೀಪುರದಲ್ಲಿ ಇವರು ಉದ್ದಾಲಕ ಮುನಿಗಳ ಆಶ್ರಮದಲ್ಲಿ ಸಕಲ ವಿದ್ಯೆಗಳನ್ನು ಪಡೆದು, ಗ್ರಾಮದ

ಮುಂದಿರುವ ತುಂಗಭದ್ರಾ ನದಿಯಲ್ಲಿ ದೋಣಿ ನಡೆಸುವ ಅಂಬಿಗ ಕಾಯಕ ವೃತ್ತಿ ಕೈಗೊಂಡು ಸದ್ಗುಣ ಸಂಪನ್ನೆಯಾದ ಶಿವಶರಣೆ ಸುಲೋಚನೆ ಎಂಬ ವಧುವನ್ನು ವಿವಾಹವಾಗಿ ಗೃಹಸ್ಥ ಜೀವನಕ್ಕೆ ಕಾಲಿಡುತ್ತಾರೆ.

ಅಂದು ಬಸವಾದಿ ಶರಣರ ಚಿಂತನೆಗೆ ಪ್ರಭಾವಿತರಾಗಿ ದಂಪತಿ ಸಮೇತ ಅಂದಿನ ಕಲ್ಯಾಣಕ್ಕೆ ಪ್ರವೇಶಿಸಿದರು. ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪದಲ್ಲಿ ಪ್ರವೇಶಿಸಿದರು. ಶೂನ್ಯಪೀಠಾಧ್ಯಕ್ಷರಾದ ಅಲ್ಲಮಪ್ರಭುಗಳು ಇವರನ್ನು ಕಂಡು, "ಇಲ್ಲಿ ನದಿಗಳೇ ಇಲ್ಲ, ಇದು ಬಯಲು ಸೀಮೆ, ಇಲ್ಲಿ ನೀವು ಅಂಬಿಗ ಕಾಯಕ ಹೇಗೆ ಮಾಡುತ್ತೀರಿ?" ಎಂದು ಅನುಭಾವಿಕ ಅರ್ಥದಲ್ಲಿ ಪ್ರಶ್ನೆ ಮಾಡಿದರು. ಅದಕ್ಕೆ ಅಂಬಿಗರ ಚೌಡಯ್ಯನವರು ಅತ್ಯಂತ ಮಾರ್ಮಿಕವಾದ ವಚನದ ಮೂಲಕ ಉತ್ತರ ನೀಡುತ್ತಾರೆ. "ತಡೆ ನಿಲ್ಲದ ಮಹಾನದಿಯಲ್ಲಿ ಒಡಲಿಲ್ಲದಂಬಿಗ ಬಂದಿದ್ದೇನೆ, ಹಿಡಿವ ಬಿಡುವ ಮನವ ಬೆಲೆಗೊಟ್ಟಡೆ ಕಡೆಗಣಿಸಿ ಹಾಯಿಸುವ ಮಹಾಹೊಳೆಯ, ನುಡಿಯಿಲ್ಲದ ನಿಸ್ಸೀಮ ಗ್ರಾಮದಲ್ಲಿರಿಸುವೆನೆಂದಾತನಂಬಿಗರ ಚೌಡಯ್ಯ" ಎಂದು ಹೇಳಿದಾಗ ಶಿವಶರಣರೆಲ್ಲ ಸಂತೋಷಗೊಂಡು ಜಯಘೋಷ ಮಾಡುತ್ತಾರೆ. ಆಗ ಅಣ್ಣ ಬಸವಣ್ಣನವರು "ನೀವು ಅಸಾಮಾನ್ಯ ಅನುಭಾವಿಗಳು. ನಂಬಿದವರಿಗೆ ಇಂಬಿಟ್ಟು ಕಡೆಗೆ ಹಾಯಿಸುವ ನಿರಾಂಕಾರದ ಪರಶಿವನ ನಿಲುವು ನಿಮ್ಮಲ್ಲಿದೆ. ನೀವು ಅನುಭವ ಮಂಟಪದ ಅನರ್ಘ್ಯ ರತ್ನ" ಎಂದು ಗುಣಗಾನ ಮಾಡಿ, ಶಿವಶರಣರೆಲ್ಲರಲ್ಲಿ 'ನಿಜಶರಣ' ಎಂಬ ಬಿರುದಾಂಕಿತ ನೀಡಿ ಗೌರವಿಸುತ್ತಾರೆ. ಇವರು ಹಲವಾರು ವಚನಗಳು ರಚಿಸಿದ್ದಾರೆ, ನಮಗೆ ದೊರಕಿದ್ದು 330 ಮಾತ್ರ ಎನ್ನಲಾಗಿದೆ. ಕಲ್ಯಾಣ ಕ್ರಾಂತಿಯಲ್ಲಿ ಶರಣ ಧರ್ಮ ರಕ್ಷಣೆ, ವಚನ ಸಾಹಿತ್ಯ ಉಳಿವಿನಲ್ಲಿ ಅಂಬಿಗರ ಚೌಡಯ್ಯನವರ ಪಾತ್ರ ಪ್ರಮುಖವಾಗಿದೆ. ವಚನ ಸಾಹಿತ್ಯ ಕಟ್ಟುಗಳನ್ನು ಬೆನ್ನಿಗೆ ಕಟ್ಟಿಕೊಂಡು ಖಡ್ಗ ಹಿಡಿದು ಹೋರಾಡಿದ ವೀರ ಗಣಾಚಾರಿ ಶರಣರಾಗಿದ್ದಾರೆ.

ಶಿವಪುರಕ್ಕೆ ಬಂದು ತುಂಗಭದ್ರಾ ನದಿಯಲ್ಲಿ ದೋಣಿ ಕಾಯಕ ಮಾಡುತ್ತಾ ಮೂಢನಂಬಿಕೆ, ಕಂದಾಚಾರ, ವೈದಿಕತೆಯನ್ನು ವಿರೋಧಿಸುತ್ತಾ ಶಿವಾನುಭವ, ವಚನಗಳ ಚಿಂತನೆ, ಶರಣ ತತ್ವವನ್ನು ಪ್ರಚಾರಗೊಳಿಸುತ್ತಾ ಅನೇಕ ಜನರಿಗೆ ಅಂಟಿರುವ ಕ್ಷಯರೋಗ, ಕುಷ್ಠರೋಗ, ಮಹಾಮಾರಿ ರೋಗರುಜಿನಗಳನ್ನು ಭಸ್ಮ-ಮಂತ್ರಪಾದೋದಕದಿಂದ ನಿವಾರಿಸುತ್ತಿದ್ದರು. ತುಂಬಿದ ಕಲ್ಲಿನ ದೋಣಿ ನಡೆಸಿ ಪವಾಡಗೈಯ್ಯುತ್ತಾನೆ ಮತ್ತು ಗುತ್ತರಸನ ಮಗ ಹಾವು ಕಚ್ಚಿ ಸತ್ತಾಗ ಭಸ್ಮ ಮಂತ್ರ ಪಾದೋದಕದಿಂದ ಬದುಕಿಸುತ್ತಾನೆ. ಇದರಿಂದ ಗುತ್ತರಸನು ಹಲವಾರು ಭೂಮಿಯನ್ನು ದಾನವಾಗಿ ಕೊಡುತ್ತಾನೆ. ಕಾಲಾನಂತರ ಚೌಡಯ್ಯನು ಅದನ್ನು ಶಿವದೇವಮುನಿಗೆ ಆ ಭೂಮಿಯನ್ನು ನೀಡಿ ಅದನ್ನು ಬಡವರಿಗೆ, ರೋಗಿಗಳಿಗೆ ಬಳಸಬೇಕೆಂದು ಆಜ್ಞೆ ಮಾಡುತ್ತಾನೆ. ಚೌಡಯ್ಯನವರಿಗೆ ಪುರವರ ಎಂಬ ಮಗನಿದ್ದನೆಂದು ಹೇಳಲಾಗಿದೆ. 12ನೆಯ ಶತಮಾನದ ಸಾಮಾಜಿಕ ಜೀವನದ ಸ್ಥಿತ್ಯಂತರಕ್ಕೆ ಜಾತಿಜಾತಿಗಳ ಮಧ್ಯೆ ಉದ್ಭವಿಸಿದ ಕಲಹವೂ ಒಂದು ಪ್ರಮುಖ ಕಾರಣವಾಗಿತ್ತು; ಅಂದು ಸುಮಾರು ಹದಿನೆಂಟು ಜಾತಿಗಳು ನೆಲೆಯೂರಿದ್ದ ಸಂಗತಿ

ಅಂಬಿಗರ ಚೌಡಯ್ಯನವರ ವಚನದಿಂದಲ್ಲದೆ, ಜೇಡರ ದಾಸಿಮಯ್ಯನ, ಸೊಡ್ಡಳ ಬಾಚರಸರ ವಚನಗಳಿಂದಲೂ ತಿಳಿದುಬರುತ್ತದೆ. ಆದ್ದರಿಂದ ಅವರು ಹದಿನೆಂಟು ಜಾತಿಗಳನ್ನು ಮನುಷ್ಯನ ಅಂಗಾಂಗಗಳಿಗೆ ಸಮೀಕರಿಸುವುದರ ಮುಖಾಂತರ ಅವುಗಳನ್ನು ಸಮಾಜದಿಂದ ಬೇರುಸಹಿತ ಕೀಳಲು ಪ್ರಯತ್ನಿಸಿದರು.

**ಶೀಲವಂತರು ಶೀಲವಂತರು ಎಂದು ಶೀಲದಲ್ಲಿ**
**ಆವರಿಸುವ ಅಣ್ಣಗಳೇ**
**ನಿಮ್ಮ ಶೀಲವಾವುದು ಹೇಳಿರೋ**
**ಅರಿಯದಿದ್ದಡೆ ಕೇಳಿರೋ**
**ಕಣ್ಣೆ ಕಂಚುಗಾರ, ಕರ್ಣವೇ ಬಣಜಿಗ**
**ಮೂಗೇ ಈಳಿಗ, ಕೊರಳೇ ಕುಂಬಾರ**
**ತುಟಿಯೇ ಹೆಂಡಗಾರ, ಹಲ್ಲೆ ಕಲ್ಲುಕುಟಿಗ**
**ಮೋಪುಗಾರ ಚೆನ್ನೇ, ಜೇಡ, ಅಕ್ಕಸಾಲಿಗ ಅಂಗೈ**
**ಮುಂಗೈಯೇ ಬಡಿಗ, ಕರವೇ ಕೋಮಟಿಗ**
**ಕಣಕಾಲೇ ಕಾಳಿಂಗಿ, ಕುಂಡಿಯೆ ಕುಡುವೊಕ್ಕಲಿಗ**
**ಒಳದೊಡೆಯೇ ಸಮಗಾರ, ಹೊರದೊಡೆಯೇ ಮಚ್ಚಿಗ**
**ಮೇಗಾಡಿ ಹೊಲೆಯ, ಬುದ್ದಿಯೆ ಬಯಲುಗಂಬಾರ**
**ಇಂತಪ್ಪ ಕುಲ ಹದಿನೆಂಟು ಜಾತಿ**
**ಎಲುಮಾಂಸ ತುಂಬಿಟ್ಟುಕೊಂಡು**
**ನನ್ನ ಕುಲ ಹೆಚ್ಚು ನಿನ್ನ ಕುಲ ಕಡಿಮೆ ಎಂದು**
**ಹೊಡೆದಾಡುವಂತಹ ಅಣ್ಣಗಳನ್ನು ಹಿಡಿತಂದು**
**ನಮ್ಮ ಪರಿಹಾರಿ ಉತ್ತಣ್ಣನ ನಾಮ ಪಾದುಕೆಯಿಂದ**
**ಫಡ ಫಡನೆ ಹೊಡೆಯೆಂದಾತ ನಮ್ಮ ಅಂಬಿಗರ ಚೌಡಯ್ಯ!**

ಈ ವಚನದಲ್ಲಿ ಚೌಡಯ್ಯನವರು ಹದಿನೆಂಟು ಜಾತಿಯೆಂದು ಹದಿನೇಳನ್ನೇ ಹೇಳಿದ್ದಾರೆ. ಅಲ್ಲಿ ಬಿಟ್ಟು ಹೋಗಿರುವ ಬ್ರಾಹ್ಮಣರನ್ನು ಸೇರಿಸಿದರೆ ಸಂಖ್ಯೆ ಹದಿನೆಂಟಾಗುತ್ತದೆ. ಸಮಾಜದ ದೇಹದಲ್ಲಿ ಮೈವೆತ್ತಿರುವ ಜಾತಿಗಳನ್ನು ಎತ್ತಿಕೊಂಡು ಮನುಷ್ಯನ ಒಂದೊಂದು ಅಂಗಕ್ಕೆ ಒಂದೊಂದು ಜಾತಿಯನ್ನು ಸಮೀಕರಿಸಿ, ಮನುಷ್ಯ ಸಮಾಜದ ಒಂದು ವ್ಯಕ್ತಿ ಇದ್ದಂತೆ, ಅದು ಅಖಂಡ ವಸ್ತು ಅದರ ಭಿನ್ನ ಭಾಗಗಳೇ ಜಾತಿಗಳು ಎಂಬ ಕಲ್ಪನೆ ವಿನೂತನವಾಗಿದೆ. ಜಾತಿಯ ನಿರ್ಮೂಲನೆಗೆ ಚೌಡಯ್ಯನವರು ಬಳಸಿರುವ ರೂಪಕ ವಿಧಾನ ಅತ್ಯಂತ ಪರಿಣಾಮಕಾರಿಯಾದುದಾಗಿದೆ. ಇವರ ವಚನಗಳು ಅಧರಕ್ಕೆ ಕಹಿಯಾದರೆ ಉದರಕ್ಕೆ ಸಿಹಿ. ಇಚ್ಛಾಮರಣ ಶಕ್ತಿಯುಳ್ಳ ಅಂಬಿಗರ ಚೌಡಯ್ಯ ಶತಾಯುಷಿಗಳಾಗಿದ್ದು, ಕೊನೆಯ ದಿನಗಳಲ್ಲಿ ಶಿವಾನುಭವದ ಚಿಂತನೆಗೈಯುತ್ತಾ ಗುರುನಾಮಸ್ಮರಣೆಯೊಂದಿಗೆ ತುಂಗಭದ್ರಾ ನದಿಯ ತೀರದಲ್ಲಿ ಗಂಗೆಯ ಮಡಿಲಲ್ಲಿ ಇವರ ಐಕ್ಯಮಂಟಪವಿದೆ.

### ಪರಾಮರ್ಶನ ಗ್ರಂಥಗಳು:

1. ಗುರುಲಿಂಗಪ್ಪ ಧಬಾಲೆ, (2018), ಅಂಬಿಗರ ಚೌಡಯ್ಯ, ಬಸವಕಲ್ಯಾಣ: ಪ್ರಸಾರಾಂಗ, ವಚನ ವಿಶ್ವವಿದ್ಯಾಲಯ ಅನುಭವ ಮಂಟಪ.
2. ಬಸವರಾಜ ಸಬರದ, (2022), ಶರಣರ ಧಾರ್ಮಿಕ ಸಿದ್ಧಾಂತಗಳು, ಭಾಲ್ಕಿ: ಬಸವಧರ್ಮ ಪ್ರಸಾರ ಸಂಸ್ಥೆ.